# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ ನ್ಯಾಯಾಲಯ, ಟಿ.ನರಸೀಪುರ

**ಸಿಸಿ ನಂಃ 463-24 ಸಿಡಬ್ಲ್ಯೂ- 1 ಪಿಡಬ್ಲ್ಯೂ-3**

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವಣ್ಣ ಕೆ |
| ತಂದೆಯ ಹೆಸರು | : | ಕೃಷ್ಣಪ್ಪ |
| ವಯಸ್ಸು | : | 53. ವರ್ಷ |
| ಉದ್ಯೋಗ | : | ಆಹಾರ ನಿರೀಕ್ಷಕರು, |
| ವಾಸಸ್ಥಳ | : | ಮೈಸೂರು |

**ಸಾಕ್ಷಿಗೆ ದಿಃ 26.02.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

2015 ರಿಂದ 2021 ರವರೆಗೆ ಟಿ.ನರಸೀಪುರ ತಾಲ್ಲೂಕಿನಲ್ಲಿ ಆಹಾರ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.03.12.2022 ರಂದು ಮಾನ್ಯ ಎಸ್.ಪಿ. ರವರು ಚಾ.ಸಾ. 2 ಮತ್ತು 3 ರವರಿಗೆ ಕರೆ ಮಾಡಿ ಮಾಹಿತಿಯನ್ನು ನೀಡಿದ್ದು, ಅದರಂತೆ ಅವರಿಬ್ಬರು ಮಾವಿನಹಳ್ಳಿ ಗೇಟ್ ಬಳಿ ಹೋಗಿರುತ್ತಾರೆ. ಆಗ ಸಮಯ ರಾತ್ರಿ 7.00 ರ ಆಗಿರುತ್ತದೆ. ಸ್ಥಳಕ್ಕೆ ವಾಹನದ ಸಂಖ್ಯೆ..ಕೆ.ಎ.40-4383 ಈಚರ್ ಟೆಂಪೋ ವಾಹನ ಬಂದಿದ್ದು ಅದನ್ನು ಪರಿಶೀಲಿಸಿ ವಾಹನದ ದಾಖಲೆಗಳನ್ನು ಕೇಳಿದಾಗ ಅವರು ನಿರಾಕರಿಸಿದ್ದು, ವಾಹನವನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ವಾಹನದಲ್ಲಿ ಪಡಿತರ ಅಕ್ಕಿ ಇರುವುದು ತಿಳಿದುಬಂದಿರುತ್ತದೆ. ನಂತರ ವಾಹನ ಮತ್ತು ವಾಹನದ ಚಾಲಕರನ್ನು ತಲಕಾಡು ಪೋಲಿಸ್ ಠಾಣೆಗೆ ಅವರಿಬ್ಬರು ತೆಗೆದುಕೊಂಡು ಹೋಗಿರುತ್ತಾರೆ. ನಂತರ ನನಗೆ ತಲಕಾಡು ಪೋಲೀಸ್ ಠಾಣೆಯವರು ಕರೆ ಮಾಡಿ ಸದರಿ ವಿಚಾರವನ್ನು ನನಗೆ ತಿಳಿಸಿ ಅಕ್ಕಿಯನ್ನು ಪರಿಶೀಲಿಸುವಂತೆ ಕೇಳಿರುತ್ತಾರೆ. ನಂತರ ರಾತ್ರಿ 12.30 ಕ್ಕೆ ನಾನು ತಲಕಾಡು ಪೋಲೀಸ್ ಠಾಣೆಗೆ ಹೋಗಿರುತ್ತೇನೆ. ಚಾ,ಸಾ. 4 ಮತ್ತು 5 ರವರನ್ನು ನಾನೇ ಕರೆಸಿ ಅವರ ಸಮಕ್ಷಮದಲ್ಲಿ ಅಕ್ಕಿಯನ್ನು ಪರಿಶೀಲನೆ ಮಾಡಿರುತ್ತೇನೆ. ಹಾಗೂ ಅಕ್ಕಿ ಪಡಿತರ ಅಕ್ಕಿ ಎಂದು ತಿಳಿದು ಬಂದಿರುತ್ತೆದೆ. ನಂತರ ತಲಕಾಡು ಪೋಲಿಸ್ ಠಾಣೆಯಲ್ಲಿ ವಾಹನದಲ್ಲಿದ್ದ ಅಕ್ಕಿಯ್ನನು ಪರಿಶೀಲನೆ ಮಾಡಿದಾಗ ಅದರಲ್ಲಿ 142 ಅಕ್ಕಿ ಚೀಲಗಳು ಇರುವುದು ಕಂಡುಬಂದಿರುತ್ತದೆ. ಒಂದು ಚೀಲದ್ಲಲಿ 42 ಕೆ.ಜಿ. ಅಕ್ಕಿ ಇರುತ್ತದೆ. ಒಟ್ಟು 59 ಕ್ವಿಂಟಾಲ್ 64 ಕೆ.ಜಿ. ಅಕ್ಕಿ ಇರುತ್ತದೆ. ನಂತರ ಈ ಸಂಬಂಧ ನಾನು ದೂರನ್ನು ಸಲ್ಲಿಸಿರುತ್ತೇನೆ. ನಂತರ ಮಹಜರ್ ನ್ನು ರಾತ್ರಿ 1.30 ರಿಂದ 3.30

ರವರೆಗೆ ಪೋಲಿಸ್ ಠಾಣಾ ಆವರಣದಲ್ಲಿ ಜರುಗಿಸಿದ್ದು, ಆ ಸಮಯದಲ್ಲಿ ನಾನು ಮತ್ತು ಚಾ,ಸಾ. 2 ರಿಂದ 5 ಹಾಜರಿದ್ದು ಮಹಜರ್ ಗೆ ಸಹಿ ಮಾಡಿರುತ್ತೇನೆ. 1 ನೇ ಆರೋಪಿಯು ಹಾಜರಿದ್ದು , ಅವರನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರು ಹಾಜರಿದ್ದು ಅವರನ್ನು ನೋಡಿ ಗುರುತಿಸಲು ಆರೋಪಿ ಪರ ವಕೀಲರು ಸಮ್ಮತಿಸಿರುತ್ತಾರೆ.

ನಿಪಿ 1 ರ ಪೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ದಿಃ 05.12.2022 ರಂದು ಪೋಲೀಸರಿಗೆ ಸಲ್ಲಿಸಿದ ದೃಡೀಕರಣ ಪತ್ರ ವನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ 5 ಎಂದು , ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಶ್ರೀ ಎಂ.ಎಸ್.ಆರ್. ವಕೀಲರಿಂದ:</u>**

ಘಟನೆ ನಡೆದ ಸಮಯದಲ್ಲಿ ನಾನು ಮೈಸೂರಿನಲ್ಲಿ ವಾಸವಿದ್ದೆನು. ನನಗೆ ರಾತ್ರಿ 10.30 ಕ್ಕೆ ಕರೆ ಬಂದಿರುತ್ತದೆ. ಪಂಚರಿಗೆ ಲಿಖಿತ ರೂಪದಲ್ಲಿ ನೋಟೀಸನ್ನು ನೀಡಿರುತ್ತೇನೆ. ಪಂಚರು ನನಗೆ ಮೊದಲೇ ಪರಿಚಯ ಇದ್ದರು. ಪಡಿತರ ಅಕ್ಕಿಯ ಬಗ್ಗೆ ದೃಡೀಕರಣ ಪತ್ರವನ್ನು ನೀಡಿರುತ್ತೇನೆ. ಪಡಿತರ ಅಕ್ಕಿ ಗೋಣಿ ಚೀಲದಲ್ಲಿ ಪ್ಯಾಕ್ ಮಾಡಿರುತ್ತಾರೆ ಎಂದರೆ ಸರಿ . ಅದರ ಮೇಲೆ ಲೇಬಲ್ ಇರುತ್ತದೆ ಎಂದರೆ ಸರಿ. ಪಡಿತರ ಅಕ್ಕಿ ಮುಕ್ತ ಮಾರುಕಟ್ಟೆಯಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. 142 ಚೀಲವು ಪ್ಲಾಸ್ಟಿಕ್ ಚೀಲವಾಗಿರುತ್ತದೆ. ಅದು ವಿವಿಧ ಬಣ್ಣಗಳಲ್ಲಿ ಇತ್ತು ಎಂದರೆ ಸರಿಯಲ್ಲ. ಪ್ರತಿ ಚೀಲವನ್ನು ಪ್ರತ್ಯೇಕವಾಗಿ ತೂಕ ಮಾಡಿರುತ್ತೇವೆ. ಸುಮಾರು 15-20 ಚೀಲಗಳಲ್ಲಿ ಮಾದರಿಯನ್ನು ತೆಗೆದಿರುತ್ತೇವೆ. ಸದರಿ ಚೀಲದಲ್ಲಿ ತೆಗೆದ ಅಕ್ಕಿಯನ್ನು ಒಂದೇ ಚೀಲದಲ್ಲಿ ಹಾಕಿರುತ್ತೇವೆ. 142 ಚೀಲದಲ್ಲಿದ್ದ ಅಕ್ಕಿ ಬೇರೆ ಬೇರೆ ತೂಕದಲ್ಲಿತ್ತು. ಮಹಜರ್ ಸಮಯದಲ್ಲಿ ಪೋಲೀಸರು , ನಾನು ಹಾಗೂ ಉಳಿದ ಸಿಬ್ಬಂದಿಗಳು ಹಾಜರಿದ್ದೆವು. ನಾವು ಜಪ್ತಿ ಪಡಿಸಿದ ಅಕ್ಕಿಗೂ , ಆರೋಪಿಗಳಿಗೂ ಸಂಬಂಧ ಇಲ್ಲದೇ ಇದ್ದರು ಮೇಲಧಿಕಾರಿಗಳ ಮಾತನ್ನು ಕೇಳಿ ಈ ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ದೂರಿನಲ್ಲಿ ಹೇಳಿರುವ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರಿಗೆ ಘಟನಾ ಸ್ಥಳದಲ್ಲಿ ನೋಟೀಸನ್ನು ನೀಡಿರುತ್ತೇನೆ.

**<u>ಮರು ವಿಚಾರಣೆ ಇಲ್ಲಃ</u>**

**<u>(ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)</u>**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**